೩ ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು & ಪ್ರ.ದ.ನ್ಯಾ.ದಂಡಾಧೀಕಾರಿಗಳು, ವಿಜಯಪುರ ಇವರ ನ್ಯಾಯಾಲಯದಲ್ಲಿ

ಕ್ರಿಮೀನ ಮಿಸ್ ನಂ. ೬೪೮/೨೦೨೨
ಸಿಡಬ್ಲು-೧

(ಸಾಕ್ಷಿಗೆ ದಿ.೧೩.೦೧.೨೦೨೩. ಕರೆಯಿಸಿ ಪ್ರಮಾಣವಚನ ನೀಡಲಾಯಿತು.)

ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿ ಬರೆದ ಅಂಶಗಳನ್ನು ನಾನೇ ಹೇಳಿ ಬರೆಸಿದ್ದು ಅದರಲ್ಲಿರುವ ವಿಷಯಗಳು ಸರಿ ಮತ್ತು ಸತ್ಯ ಇರುತ್ತವೆ. ಅದನ್ನು ಓದಿ ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ಈ ಪ್ರಕರಣಕ್ಕೆ ಪೂರಕವಾಗಿ ಕೆಲವು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ಸಾಕ್ಷಿ ಈ ದಾಖಲೆಗಳನ್ನು ನೋಡಿ ಗುರುತಿಸಿದ್ದು, ಅಲಭ್ಯ ಪ್ರಮಾಣ ಪತ್ರವನ್ನು ನಿಪಿ-೧ ಎಂದು, ೨ ಆಧಾರ ಕಾರ್ಡನ ನೊಟರಿ ಪ್ರತಿಗಳನ್ನು ಮೂಲ ದಾಖಲೆಗಳೊಂದಿಗೆ ತಾಳೆ ಮಾಡಿ ನಿಪಿ-೨ ಮತ್ತು ೩ ಎಂದು ಗುರುತಿಸಿ ಮರಳಿ ನೀಡಲಾಯಿತು. ದಿ. ೧೮.೧೧.೨೦೨೨ ರ ರಣರಂಗ ಮತ್ತು ಈದಿವಸ ದಿನಪತ್ರಿಕೆಗಳನ್ನು ನಿಪಿ-೪ ಮತ್ತು ೬ ಎಂದು ಗುರುತಿಸಲಾಯಿತು.

ಪಾಟೀ ಸವಾಲು: ಎದುರುದಾರ ಪರ ವಕೀಲರಿಂದ

ಮೃತ ಜೋಗಪ್ಪ ಯಡವೆ ನನ್ನ ಅಜ್ಜ, ಸದರಿಯವರು ೦೫.೦೧.೧೯೮೬ ರಂದು ರತ್ನಾಪೂರ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಜ್ಜ ಮೃತಪಟ್ಟಾಗ ನಾನಾಗಲಿ, ನನ್ನ ತಂದೆಯಾಗಲಿ ಮರಣದ ಉತಾರೆಗಾಗಿ ಅರ್ಜಿಯನ್ನು ಕೊಟ್ಟಿಲ್ಲ. ಸದರಿ ದಾಖಲೆಯು ವಾರ್ಸಾ ಮಾಡಿಕೊಳ್ಳಲು ಅವಶ್ಯಕವಾಗಿರುತ್ತದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

೩ ನೇ ಹೆಚ್ಚುವರಿ ಸಿವಿಲ್ ಮತ್ತು
ಜೆ.ಎಮ್.ಎಫ್.ಸಿ.ನ್ಯಾಯಾಧೀಶರು,ವಿಜಯಪುರ.